‘ಪಾಂಬುವನ್ನ ನಂಬುವ ಹಾಗಿಲ್ಲ. ಅವನ ಬಗ್ಗೆ ಕೆಲವೊಂದು ಆರೋಪಗಳಿವೆಯಲ್ಲವೆ? ಆತ ಒಂದು ಕೊಲೆ ಕೇಸ್‌ನಲ್ಲೂ ಭಾಗಿಯಾಗಿದ್ದಾನಲ್ಲವೆ? ಆ ಬಗ್ಗೆ ಕೇರಳ ಸರಕಾರ ಕೂಡ ನಮಗೆ ತಿಳಿಸಿದೆಯಲ್ಲವೆ? ಆದರೆ ಅದು ಸಾಬೀತಾಗಿಲ್ಲವಾದ್ದರಿಂದ ಅವನನ್ನು ನಾವು ವಿಚಾರಿಸಿಲ್ಲ’ ಹಳೆಯ ಕೇಸನ್ನು ನೆನಪಿಸಿಕೊಂಡವನ ನೆನಪಿನ ಶಕ್ತಿಯ ಬಗ್ಗೆ ಬಾಸ್‌ಗೆ ಹೆಮ್ಮೆಯೆನಿಸಿತು.

‘ಸಾರಂಗ, ನಿನ್ನನ್ನು ವಾಪಾಸು ಕರೆಸಿಕೊಂಡಿದ್ದು ಸಾರ್ಥಕವಾಯ್ತು. ಈ ಕೇಸ್ ಮುಗಿಯುತ್ತಲೇ ಪಾಂಬುನ ಬಗ್ಗೆ ತಿಳಿದುಕೊಳ್ಳಬೇಕು. ಅಲ್ಲಿಯವರೆಗೂ ಅವನಿಗೆ ಆ ಬಗ್ಗೆ ಸಂದೇಹ ಬರಬಾರದು. ಇದು ಗೌಪ್ಯವಾಗಿರಲಿ. ಯಾರಾಲ್ಲೂ ಬಾಯಿ ಬಿಡಬೇಡ. ಅವನ ಕೇಸ್ ಮುಗಿದ ಕೂಡಲೇ ನಿನಗೆ ಪ್ರಮೋಷನ್ ಕೊಡಿಸೋಣ’ ಪಿಸಿ ಮುಖದಲ್ಲಿ ಗೆಲುವಿನ ಕಳೆ. ಮೆತ್ತಗೆ ತಲೆ ಕೆರೆದುಕೊಂಡ.

ಬಾಸ್‌ನ ಸ್ವಾರ್ಥ! ಮೊದಲು ತಾನೇ ಈ ಕೇಸನ್ನು ಕೈಗೆತ್ತಿಕೊಂಡರೆ?! ಪಾಂಬು ಹೇಗೂ ತನಗೆ ಹೆಚ್ಚು ಆಪ್ತ. ಅವನಿಂದ ವಿಷಯ ಸಂಗ್ರಹಿಸುತ್ತಲೇ ಬಾಸ್‌ನನ್ನು ಮೆಚ್ಚಿಸುವಂತೆ ವರದಿ ಸಲ್ಲಿಸುತ್ತಲೇ ಇರಬೇಕು. ಇದೇ ಸರಿಯಾದ ಮಾರ್ಗ.

ಬಂಡೆಯ ಒಳಗೆ ಮಂದವಾದ ದೀಪ ಆಗಲೇ ಬೆಳಗಿತ್ತು. ಸಮುದ್ರ ದಂಡೆಯಲ್ಲಿದ್ದ ಜನ ಕರಗುವಂತೆ ಕಂಡಿತು. ಸೂರ್ಯ ಪಶ್ಚಿಮದ ಕಡೆಗೆ ಕರಗಿ ಆಗಲೇ ಬಹಳ ಹೊತ್ತು ಮೀರಿತ್ತು. ದೀಪಸ್ತಂಭದ ಬೆಳಕು ಗಳಿಗೆಗೊಮ್ಮೆ ಜಿಗ್ಗನೆ ಮಿಂಚಿ ಮರೆಯಾಗುತ್ತಿತ್ತು.

ಇನ್ಸ್‌ಪೆಕ್ಟರ್ ರಾಜಧಾನಿ ಬಂಡೆಯ ಬಾಗಿಲಿಗೆ ನಿಂತ. ಕಾಕುಟ್ಟ ಅಲ್ಲಿರುವುದಾದರೆ ಬಂದ ದಾರಿಗೆ ಸುಂಕವಿಲ್ಲದೆ ಹಿಂದಿರುಗಬೇಕು. ಪಿಸಿಯ ಕೈಯಿಂದ ಫೈಲನ್ನು ತೆಗೆದುಕೊಂಡು ಒಳಗೆ ಹೋಗಿ ಬರುವಂತೆ ಸಂಜ್ಞೆ ಮಾಡಿದ. ಪಿಸಿ ಸಾರಂಗ ಬಂಡೆಯ ಒಳಗೆ ನಡೆದ.

ನಿರ್ಜನವಾಗಿತ್ತು ಬಂಡೆ!

ಗಲ್ಲೆಯ ಮೇಲೆ ಕುಳಿತಿದ್ದ ವ್ಯಕ್ತಿ ಪಿಸಿಯನ್ನು ನೋಡುತ್ತಲೇ ಮೆಲ್ಲಗೆ ಗಲ್ಲೆಯ ಕೆಳಗೆ ಅವಿತಂತೆ ಕುಳಿತ. ಪಿಸಿಯ ಗಮನಕ್ಕೆ ಬಾರದ ಸಂಗತಿ. ಆದರೆ ಹೊರಗಿದ್ದ ರಾಜಧಾನಿಯ ಗಮನಕ್ಕೆ ಬಂದ ವಿಷಯ ಅದು. ಪಿಸಿ ನಕಾರಾತ್ಮಕವಾಗಿ ತಲೆಯಲುಗಿಸುತ್ತಾ ಹೊರಗೆ ಬಂದ. ಇನ್ಸ್‌ಪೆಕ್ಟರ್ ರಾಜಧಾನಿಯ ಮುಖದಲ್ಲಿ ನಗುವಿತ್ತು. ಪಿಸಿಗೆ ಆಶ್ಚರ್ಯ. ಅಷ್ಟರಲ್ಲಿಯೇ ಇನ್ಸ್‌ಪೆಕ್ಟರ್ ಬಲಗಡೆಗೆ ಕೈ ತೋರಿಸಿದ.

ನಡು ವಯಸ್ಸಿನ ವ್ಯಕ್ತಿಯೊಬ್ಬ ಬಂಡೆಯ ಹಿಂದಿನಿಂದ ವೇಗದ ನಡಿಗೆಯಲ್ಲಿ ಸಾಗುತ್ತಿರುವುದು ಕಂಡಿತು!

## 2

ಬಂಡೆಯ ಹಿಂದಿನಿಂದ ಸಾಗಿದ ವ್ಯಕ್ತಿಗೂ ಇನ್ಸ್‌ಪೆಕ್ಟರ್ ರಾಜಧಾನಿಯ ಮುಖದಲ್ಲಿರುವ ನಗುವಿಗೂ ತಾಳೆ ಹಾಕಿದ ಪಿಸಿ ಸಾರಂಗ. ಏನೊಂದೂ ತಿಳಿಯಲಿಲ್ಲ. ಹೀಗೆ ತಲೆ ಬಡ್ಡು ಹಿಡಿದರೆ ಲಹರಿಯ ಕೇಸ್‌ಗೆ ಬೇಕಾಗುವ ಮಾಹಿತಿಯನ್ನು ಗಳಿಸಿಕೊಳ್ಳುವುದು ಸುಲಭವಲ್ಲ. ಇವತ್ತು ರಾತ್ರಿಯಿಂದಲೇ ಕ್ಯೂಬಿಕಲ್ ಹಿಡಿದುಕೊಂಡು ಬಣ್ಣಗಳನ್ನ ಜೋಡಿಸಿಕೊಳ್ಳಬೇಕು. ಮೆದುಳು ಚುರುಕಾಗುವವರೆಗೂ ಚೆಸ್ ಆಡಬೇಕು. ಆಡಾಡುತ್ತಲೇ ತಲೆಗೆ ಸಾಣೆ ಹಿಡಿದಂತಾಗುತ್ತದೆ. ಆಮೇಲೆ ಎಲ್ಲವೂ ನಿರಾಳ. ಮುಸ್ಸಂಜೆಯಲ್ಲಿಯೇ ಪಿಸಿಗೆ ವಿಪರೀತ ಕನಸುಗಳು. ಇನ್ಸ್‌ಪೆಕ್ಟರ್ ಫೈಲ್‌ನಿಂದ ಸಾರಂಗನ ತಲೆಗೆ ಮೊಟಕಿದ.

‘ಹೇಳಿದ ಕೆಲಸ ಮಾಡಿದ ಕೂಡಲೇ ರಿಪೋರ್ಟ್ ಕೊಡಬೇಕೆನ್ನುವ ಪರಿಜ್ಞಾನ ಇಲ್ಲದೋನು ನೀನು’

ಪಿಸಿ ತುಟಿ ಕಚ್ಚಿಕೊಂಡ.

‘ಕ್ಷಮಿಸಿ ಸಾರ್, ನೀವೇನೋ ಕೈಸನ್ನೆಯಲ್ಲಿ ಹೊರಗೆ ತೋರಿಸಿದ್ರಿ. ಅದನ್ನೇ ನೋಡ್ತಾ ಆಲೋಚಿಸುವುದಕ್ಕೆ ಶುರು ಮಾಡಿದೆ. ಹಾಗಾಗಿ ರಿಪೋರ್ಟ್ ಮಾಡುವುದಕ್ಕೆ ಮರ್ತು ಬಿಟ್ಟೆ’

‘ಸರಿ, ಈ ಫೈಲ್ ಹಿಡ್ಕೋ. ಈಗಲಾದ್ರೂ ರಿಪೋರ್ಟ್ ಕೊಡು’ ಮೆಲುದನಿಯಲ್ಲಿ ಹೇಳಿದ.

ಪಿಸಿ ಇನ್ನೊಮ್ಮೆ ಒಳಗೆಲ್ಲಾ ದೃಷ್ಟಿ ಹಾಯಿಸಿದ.

‘ಒಳಗೆ ಯಾವ ನರ ಮನುಷ್ಯನೂ ಇಲ್ಲ. ಬಂದದ್ದು ವ್ಯರ್ಥ ಅನ್ಸುತ್ತೆ. ಪಾಂಬು ನಿಮಗೆ ಮೋಸ ಮಾಡ್ದ ಅನಿಸೊಲ್ವಾ? ಅವನನ್ನು ನಂಬೋದು ಕಷ್ಟ ಸಾರ್...’

ಇನ್ಸ್‌ಪೆಕ್ಟರ್ ರಾಜಧಾನಿಯ ಮುಖದಲ್ಲಿ ಮುಗುಳ್ನಗು ಮೂಡಿತು. ಬಂಡೆಯ ಒಳಗೆ ಇಣುಕಿದ.

‘ಎಲ್ಲವನ್ನೂ ನೆಗೆಟಿವ್ ಆಗಿ ಆಲೋಚಿಸ್ಬೇಡ. ಕೆಲಸ ಕೆಡೋದಿಕ್ಕೆ ಕಾರಣ ಅದೇ. ಯಾವಾಗಲೂ ಪಾಸಿಟಿವ್ ಆಗಿ ಥಿಂಕ್ ಮಾಡ್ಬೇಕು’ ಮಾತು ಮುಗಿಸುತ್ತಾ ಹಿಂದಕ್ಕೆ ಹೊರಳಿದ.

‘ಸಾರ್, ಒಳಗಡೆ ಹೋಗೋದು ಬೇಡ್ವಾ?’ ಪಿಸಿಯ ಮಾತಿಗೆ ತಕ್ಷಣವೇ ನಿಂತ ಇನ್ಸ್‌ಪೆಕ್ಟರ್ .

‘ಒಳಗಡೆ ಯಾರೂ ಇಲ್ಲಾಂದ ಮೇಲೆ, ಒಳಗೆ ಹೋಗೋ ಅವಶ್ಯಕತೆ ಏನು?’ ಕುಹಕವಾಡಿದ ಇನ್ಸ್‌ಪೆಕ್ಟರ್.

‘ಸಾರ್, ಕಾಕುಟ್ಟ ಒಳಗಿದ್ದಾನೆ’ ಪಿಸಿ ಅಧಿಕಾರಿಗೆ ಹೇಳಿದ. ರಾಜಧಾನಿಯ ಕಣ್ಣುಗಳಲ್ಲಿ ಆಶ್ಚರ್ಯ ಮೂಡಿತು.

‘ರಾಂಗ್ ರಿಪೋರ್ಟ್ ಕೊಟ್ಟೆ?’

ಪಿಸಿ ಸಾರಂಗ ಅಳುಕಿನ ಜೊತೆಗೆ ತುಟಿಯರಳಿಸಿದ.

‘ಸಾರ್, ಕ್ಷಮಿಸಿ. ನೀವೇ ಅಂದ್ರಲ್ಲ ಪಾಸಿಟಿವ್ ಆಗಿ ಥಿಂಕ್ ಮಾಡೋದಿಕ್ಕೆ. ಅದಕ್ಕೆ ಕಾಕುಟ್ಟ ಒಳಗಿದ್ದಾನೇಂತ ಹೇಳ್ದೆ’

ಇನ್ಸ್‌ಪೆಕ್ಟರ್ ಅವನ ತಲೆಗೆ ಮೊಟಕಿದ.

‘ಸುಳ್ಳು ಹೇಳೋದು ನಮ್ಮ ಡಿಪಾರ್ಟ್‌ಮೆಂಟ್‌ಗೆ ಸಹ್ಯವಲ್ಲ. ನೀನು ಯಾವಾಗ ಉದ್ಧಾರವಾಗ್ತೀಯಾ? ಹೀಗೆ ಮಾಡಿದ್ರೆ ನಮ್ಮ ಕೆಲಸ ಪಕ್ಕನೆ ಮುಗಿಯೊಲ್ಲ. ಪ್ರಮೋಷನ್ ಅನ್ನು ಆಸೆ ಬಿಟ್ಬಿಡಬೇಕು ಅಷ್ಟೆ’

ಪಿಸಿಯ ಮುಖ ಬಿಳಚಿಕೊಂಡಿತು.

ಇನ್ಸ್‌ಪೆಕ್ಟರ್ ರಾಜಧಾನಿಗೆ ಸಮಾಧಾನವೆನಿಸಲಿಲ್ಲ. ಪಿಸಿಯನ್ನು ತಳ್ಳಿಕೊಂಡಂತೆ ವೇಗವಾಗಿ ಬಂಡೆಯ ಒಳಗೆ ನಡೆದ. ಗಲ್ಲೆಯ ಮೇಲೆ ಕುಳಿತಿದ್ದ ವ್ಯಕ್ತಿ ಎದ್ದು ನಿಂತ. ಇನ್ಸ್‌ಪೆಕ್ಟರ್ ನ ದೃಷ್ಟಿ ಮೂಲೆಯತ್ತ ಸರಿಯಿತು. ಪಿಸಿ ಸಾರಂಗ ಕೂಡ ಅವನ ಹತ್ತಿರಕ್ಕೆ ಬಂದು ನಿಂತ. ಅವನ ಕಣ್ಣುಗಳಲ್ಲಿ ಆಶ್ಚರ್ಯ ಮೂಡಿತು. ಮೂಲೆಯ ಮೇಜಿನ ಮುಂದೆ ನಾಲ್ವರು ದಾಂಡಿಗ ದೇಹಿಗರು ಕುಳಿತಿದ್ದರು. ಅಂತಹ ದೈತ್ಯ ಜೀವಗಳು ತನ್ನ ಕಣ್ಣಿಗೆ ಕಾಣಿಸದಿದ್ದುದು ಹೇಗೆ? ಪಿಸಿ ತಲೆಕೆರೆದುಕೊಂಡ.

ಇನ್ಸ್‌ಪೆಕ್ಟರ್‌ನ ಆಗಮನ ಅಲ್ಲಿದ್ದವರಿಗೆ ಆದಂತ್ತಿರಲಿಲ್ಲ. ಗ್ಲಾಸುಗಳನ್ನು ತುಟಿಗಿರಿಸಿಕೊಂಡು ಉನ್ಮಾದದ ಲೋಕಕ್ಕಿಳಿಯುತ್ತಿದ್ದರು. ಇನ್ಸ್‌ಪೆಕ್ಟರ್ ತಟ್ಟನೆ ಹಿಂದಕ್ಕೆ ಹೊರಳಿದ. ಗಲ್ಲೆಯ ವ್ಯಕ್ತಿ ವಿಧೇಯನಂತೆ ನಿಂತ. ಪಿಸಿ ಕೂಡ ಇನ್ಸ್‌ಪೆಕ್ಟರ್  ಜೊತೆಗೆ ಹೊರಗೆ ಬಂದ.

‘ತಪ್ಪು ಮಾಹಿತಿ ಕೊಟ್ಟೆ ನೀನು. ಒಳಗಿದ್ದೋರೆಲ್ಲಾ ಹೇಗೆ ಬಂದ್ರು?’ ಮಾತಿನಲ್ಲಿ ಸಿಟ್ಟಿರಲಿಲ್ಲ. ಮಾರ್ಮಿಕವಾಗಿತ್ತು ಪ್ರಶ್ನೆ.

‘ಸಾರ್, ನಾನು ಸರಿಯಾಗಿ ನೋಡಿದ್ದೆ. ಆಗ ಒಳಗೆ ಯಾರೂ ಇರಲಿಲ್ಲ ಸಾರ್’

‘ಮತ್ತೆ, ಅವರೆಲ್ಲ ಹೇಗೆ ಒಳಗೆ ಬಂದ್ರು? ಮಾಯಕದಲ್ಲಿಯೇ?’

‘ಗೊತ್ತಿಲ್ಲ ಸಾರ್’ ವಿಧೇಯತೆ ತೋರಿಸಿದ.

‘ಅದನ್ನು ನೀನು ಪತ್ತೆ ಹಚ್ಚಬೇಕು. ಅದೇ ನಿನಗೆ ಸರಿಯಾದ ಶಿಕ್ಷೆ’ ಇನ್ಸ್‌ಪೆಕ್ಟರ್‌ನ ಮಾತಿನಲ್ಲಿ ಆಜ್ಞೆ ಇತ್ತು. ಪಿಸಿ ಮೆಲ್ಲಗೆ ತಲೆಯಲುಗಿಸಿ ಒಪ್ಪಿಗೆಯಿತ್ತ.

‘ಈಗ್ಲೆ ಪತ್ತೆ ಹಚ್ಚಬೇಕೇ?’

‘ಬೇಡ. ಪತ್ತೆ ಕಾರ್ಯ ಅಷ್ಟು ಸುಲಭವೆಂದುಕೊಳ್ಳಬೇಡ. ನಿನಗೆ ಸಮಯಾವಕಾಶ ನೀಡುತ್ತೇನೆ. ನಿಧಾನಕ್ಕೆ ಪತ್ತೆ ಮಾಡಿ ನನಗೆ ತಿಳಿಸು’ ಮೊದಲಿನ ಗಂಭೀರತೆ ಈಗ ಇರಲಿಲ್ಲ. ಪಿಸಿ ಸಮಾಧಾನದ ಉಸಿರೆಳೆದುಕೊಂಡ.

ಅವರಿಬ್ಬರೂ ಹಿಂದಕ್ಕೆ ಮರಳು ದಿಣ್ಣೆಯ ಹಾದಿ ಹಿಡಿದರು. ಸಮುದ್ರದ ನೀರು ಸರಿಯಾಗಿ ಕಾಣಿಸದಿದ್ದರೂ ಸಮುದ್ರದ ಭೋರ್ಗರೆತದ ಸದ್ದು ಮಾತ್ರ ಕೇಳಿಸುತ್ತಿತ್ತು.

ಗಾಳಿ ಮರದ ತೋಪು ದಾಟಿ ಮರಳು ದಿಣ್ಣೆಯ ಮೇಲೆ ನಿಧಾನಕ್ಕೆ ನಡೆದು ಬರುತ್ತಿದ್ದಂತೆ ಮರಳಿನಲ್ಲಿ ಜಾರಿ ನಡೆಯುವ ಯಾರದೋ ಕಾಲಿನ ಸದ್ದು